ಸುಭಾಷಿತ

ವಿವಾಹ ಬಂಧನದಲ್ಲಿ ಸಂತೋಷ ಇಲ್ಲದಿರಲು ಪ್ರೀತಿಯ ಕೊರತೆ ಕಾರಣವಲ್ಲ. ಅದಕ್ಕೆ ಕಾರಣ ಸ್ನೇಹ ಇಲ್ಲದಿರುವಿಕೆ.
–ಫ್ರೆಡ್ರಿಕ್ ನೀಷೆ

Like 571K Follow

FRIDAY, 6 MAY, 2016

ಪ್ರಜಾವಾಣಿ
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ




# ‘ನೃತ್ಯ ಮಾಡುವ ರೋಬೊಟ್’ ಜರ್ಮನಿಗೆ!

141 Reads

ಪ್ರಜಾವಾಣಿ ವಾರ್ತೆ
Sat, 02/27/2016 - 01:08

Like 174 Tweet G+1 0 Pin it Share 2



ತಾವು ತಯಾರಿಸಿರುವ ರೋಬೊಟ್‌ಗಳೊಂದಿಗೆ ವಿದ್ಯಾರ್ಥಿಗಳಾದ ಅರವಿಂದ ರೆಡ್ಡಿ (9ನೇ ತರಗತಿ), ಅಮೀನುದ್ದೀನ್ (7ನೇ ತರಗತಿ), ರಮೇಶ್ ಎ. (8ನೇ ತರಗತಿ), ರಾಮಕೃಷ್ಣ ಆರ್. (9ನೇ ತರಗತಿ), ಲಾರೆನ್ಸ್ (8ನೇ ತರಗತಿ), ಬಾಲಚಂದ್ರ (7ನೇ ತರಗತಿ) –ಪ್ರಜಾವಾಣಿ ಚಿತ್ರ

**ಬೆಂಗಳೂರು:** ಈ ರೋಬೊಟ್‌ಜೇಮ್ಸ್ ಬಾಂಡ್ ಮಾಡುವ ಎಲ್ಲ ಕಸರತ್ತುಗಳನ್ನು ಮಾಡುತ್ತದೆ. ಕ್ಷಣ ಮಾತ್ರದಲ್ಲಿ ಎದುರಾಳಿಗಳನ್ನು ಬಡಿದಟ್ಟುತ್ತದೆ. ಅಷ್ಟೇ ಅಲ್ಲ, ಲಯಬದ್ಧ ಸಂಗೀತ ಕೇಳಿದರೆ ನೃತ್ಯ ಮಾಡಲಾರಂಭಿಸುತ್ತದೆ !

ಇದು ‘ಡ್ಯಾನ್ಸಿಂಗ್ ರೋಬೋಟ್’ನ ವೈಶಿಷ್ಟ್ಯಗಳು. ಈ ರೋಬೊಟ್‌ತಯಾರಿಸಿರುವವರು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು. ಈ ‘ಮಾಸ್ಟರ್ ಮೈಂಡ್ಸ್’ ಹಿಂದಿರುವ ವಿದ್ಯಾರ್ಥಿಗಳು ಆರು ಮಂದಿ. ಎಲ್ಲ ವಿದ್ಯಾರ್ಥಿಗಳು ಆರ್ಥಿಕವಾಗಿ ಹಿಂದುಳಿದ ವರ್ಗದಿಂದ ಬಂದವರು. ಅಲ್ಲದೆ, ಏಳನೇ ತರಗತಿಯ ವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತವರು.

ಈ ತಂಡವು ಬೆಂಗಳೂರಿನಲ್ಲಿ ಫೆಬ್ರುವರಿ 6ರಂದು ನಡೆದ ರಾಷ್ಟ್ರ ಮಟ್ಟದ ರೋಬೊ ಕಪ್ ಜೂನಿಯರ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ. ಜರ್ಮನಿಯಲ್ಲಿ ಜುಲೈಯಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದೆ.

ಮತ್ತೊಂದು ತಂಡ ನವದೆಹಲಿ ಯಲ್ಲಿ ನಡೆದ ‘ಫಸ್ಟ್ ಲೆಗೊ ಲೀಗ್’ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಜೂನ್‌ನಲ್ಲಿ ಫಿಲಿಪೈನ್ಸ್‌ನಲ್ಲಿ ನಡೆಯಲಿರುವ ಅಂತರ ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲಿದೆ.

ವಿದ್ಯಾರ್ಥಿಗಳ ತಂಡ: ಕಟ್ಟಡ ಕಾರ್ಮಿಕನ ಮಗ ರಮೇಶ್, ತಾಯಿಯನ್ನು ಕಳೆದುಕೊಂಡು ಅಜ್ಜಿಯ ಮನೆಯಲ್ಲಿರುವ ರಾಮಕೃಷ್ಣ, ಮನೆ ಕೆಲಸ ಮಾಡುವಾಕೆಯ ಮಗ ಲಾರೆನ್ಸ್, ಎಲೆಕ್ಟ್ರಿಶಿಯನ್ ಮಗ ಅಮೀನುದ್ದೀನ್, ಕಾರು ಚಾಲಕನ ಮಗ ಬಾಲಚಂದ್ರ, ಅರವಿಂದ್ ಈ ತಂಡದ ಸದಸ್ಯರು. ಇವರು ವಿವೇಕ್ ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ತೆಲುಗು ಪ್ರೌಢಶಾಲೆ, ಸೇಕ್ರೆಡ್ ಹಾರ್ಟ್ ಬಾಲಕರ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಎರಡು ವರ್ಷಗಳ ಪರಿಶ್ರಮ: ವಿದ್ಯಾರ್ಥಿಗಳ ಸಾಧನೆಗೆ ಬೆನ್ನೆಲುಬಾಗಿ ನಿಂತಿದ್ದು ‘ಅಕ್ಷರ ಫೌಂಡೇಷನ್’ ಸ್ವಯಂಸೇವಾ ಸಂಘಟನೆ. ಈ ವಿದ್ಯಾರ್ಥಿಗಳಿಗೆ ಎರಡು ವರ್ಷಗಳಿಂದ ರೋಬೊಟ್‌ತಂತ್ರಜ್ಞಾನದ ಬಗ್ಗೆ ತರಬೇತಿ ನೀಡುತ್ತಿದೆ. ವಿದ್ಯಾರ್ಥಿಗಳಿಗೆ ಈವರೆಗೆ ನಾಲ್ಕು ರೋಬೊಟ್‌ತಯಾರಿಸಿದ್ದಾರೆ.

ಎರಡು ತಿಂಗಳ ಅವಧಿಯಲ್ಲಿ ‘ಡ್ಯಾನ್ಸಿಂಗ್’ ರೋಬೊಟ್‌ತಯಾರಿಸಲಾಗಿದೆ. ಈ ರೋಬೋಟ್‌ನಲ್ಲಿ ಏಳು ಮೋಟಾರ್‌ಗಳು ಇವೆ. ಎರಡು ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ. ಕಂಪ್ಯೂಟರ್‌ಗಳ ನಡುವೆ ಸಂವಹನಕ್ಕೆ ಬ್ಲೂ ಟೂತ್ ಅಳವಡಿಸಲಾಗಿದೆ ಎಂದು ವಿದ್ಯಾರ್ಥಿ ಲಾರೆನ್ಸ್ ಹೇಳುತ್ತಾರೆ.
‘ಆರಂಭಿಕ ಹಂತದಲ್ಲಿ ತುಂಬಾ ತಪ್ಪು ಮಾಡುತ್ತಿದ್ದೆವು. ಇದರಿಂದ ಎದೆಗುಂದಲಿಲ್ಲ. ಅಂತರರಾಷ್ಟ್ರೀಯ ಸ್ಪರ್ಧೆಗೆ ತೆರಳುವ ಸಂದರ್ಭದಲ್ಲಿ ಇದನ್ನು ಮತ್ತಷ್ಟು ಮೇಲ್ದರ್ಜೆಗೆ ಏರಿಸು ತ್ತೇವೆ’ ಎಂದು ಅವರು ವಿಶ್ವಾಸದಿಂದ ನುಡಿಯುತ್ತಾರೆ.

‘ರೋಬೊಟಿಕ್ಸ್ ವಿಷಯದ ಬಗ್ಗೆ ವ್ಯಾಸಂಗ ಅಥವಾ ತರಬೇತಿ ಅನುಕೂಲಸ್ಥ ಕುಟುಂಬದ ಮಕ್ಕಳಿಗೆ ಮಾತ್ರ ಸೀಮಿತವಾಗಿದೆ. ಆರ್ಥಿಕವಾಗಿ ಹಿಂದುಳಿದ ಕುಟುಂಬದ ಮಕ್ಕಳು ಅವಕಾಶದಿಂದ ವಂಚಿತರಾಗಿದ್ದಾರೆ. ಇದನ್ನು ಗಮನಿಸಿ ಈ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ’ ಎಂದು ಅಕ್ಷರ ಫೌಂಡೇಷನ್‌ನ ರೋಬೊಟಿಕ್ಸ್ ವಿಭಾಗದ ವ್ಯವಸ್ಥಾಪಕ ಶ್ರೀಧರ ತಿಳಿಸುತ್ತಾರೆ.

‘ಎರಡು ವರ್ಷಗಳ ಹಿಂದೆ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಬಳಕೆ ಗೊತ್ತಿರಲಿಲ್ಲ. ಅವರಿಗೆ ಶುರುವಿನಲ್ಲಿ ಕಂಪ್ಯೂಟರ್ ಕಲಿಸಲಾಯಿತು. ಈಗ ತಂತ್ರಜ್ಞಾನ ಕ್ಷೇತ್ರದಲ್ಲಿ ನನಗಿಂತ ಹೆಚ್ಚಿನ ಪರಿಣಿತಿ ಸಾಧಿಸಿದ್ದಾರೆ’ ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸುವ ಸಂದರ್ಭದ ಖರ್ಚು ವೆಚ್ಚ ನಿರ್ವಹಿಸಲು ‘ketto’ ಎಂಬ ಸಾರ್ವಜನಿಕ ವೇದಿಕೆ ಮೂಲಕ ದೇಣಿಗೆ ಸಂಗ್ರಹಿಸಲಾಗುತ್ತಿದೆ ಎಂದು ಅಕ್ಷರ ಫೌಂಡೇಷನ್‌ನ ಪದಾಧಿಕಾರಿಗಳು ಹೇಳುತ್ತಾರೆ.